# ಜಿಲ್ಲಾ ಪಂಚಾಯತ ಬೆಳಗಾವಿ

ಟೆಲಿಫ್ಯಾಕ್ಸ:0831-2407294

ಯೋಜನಾ ವ್ಯವಸ್ಥಾಪಕರ ಕಾರ್ಯಾಲಯ,
ನಿರ್ಮಲ ಭಾರತ ಅಭಿಯಾನ,
ಜಿಲ್ಲಾ ನೆರವು ಘಟಕ, ಬೆಳಗಾವಿ.
E-mail:tscbgm@gmail.com

ಕ್ರಸಂ:ಜಿಪಂಬೆ:ನಿಭಾಅ:ವಿವ-35:2013-14 ದಿನಾಂಕ:28-01-2014.

ವಿಷಯ:ನಿರ್ಮಲ ಭಾರತ ಅಭಿಯಾನದಡಿ ಗೋಕಾಕ ಫಾಸ್ಟ್ ಟ್ರ್ಯಾಕ್ ತಾಲ್ಲೂಕಿನಲ್ಲಿ ಆಯ್ಕೆ ಮಾಡಲಾದ ಸ್ವಚ್ಛತಾ ದೂತರಿಗೆ ಪ್ರೇರಣಾ ಮೊತ್ತ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:1) ನಿರ್ದೇಶಕರು, ನೀರು ಮತ್ತು ನೈರ್ಮಲ್ಯ ಮಿಷನ್ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಗ್ರಾಅಪ:ರಾನೀನೈಮಿ:ನಿಭಾಅ:ಸುತ್ತೋಲೆ-22:2013-14 ದಿನಾಂಕ:03-08-2013 ಹಾಗೂ ದಿನಾಂಕ:24-09-2013.

2)ಈ ಕಾರ್ಯಾಲಯದ ಪತ್ರ ಸಮಸಂಖ್ಯೆ ದಿನಾಂಕ:01-10-2013.

3)ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯತ ಗೋಕಾಕ ಇವರ ಪತ್ರ ಸಂಖ್ಯೆ: ತಾಪಂಗೋ:ನಿಭಾಅ:2013-14 ದಿನಾಂಕ:28-01-2014.

*****

**ಪ್ರಸ್ತಾವನೆ:**

ಉಲ್ಲೇಖ (1) ರ ಸರ್ಕಾರದ ಸುತ್ತೋಲೆಗಳಲ್ಲಿ ನಿರ್ಮಲ ಭಾರತ ಅಭಿಯಾನದಡಿ ಗೋಕಾಕ ತಾಲ್ಲೂಕನ್ನು Fast track ತಾಲ್ಲೂಕನ್ನಾಗಿ ತಗೆದುಕೊಂಡು 6 ತಿಂಗಳೊಳಗೆ ಬಯಲು ಮಲ ವಿಸರ್ಜನಾ ಮುಕ್ತ ತಾಲ್ಲೂಕನ್ನಾಗಿ ಮಾರ್ಪಡಿಸುವ ನಿಟ್ಟಿನಲ್ಲಿ ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯತಿಗೆ ತಲಾ ಇಬ್ಬರು ಸ್ವಚ್ಛತಾ ದೂತರನ್ನು ನೇಮಿಸಿಕೊಂಡು ಸಿ.ಎಲ್.ಟಿ.ಎಸ್. ತರಬೇತಿ ನೀಡಲು ನಿರ್ದೇಶಿಸಿದಂತೆ, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕ ಪಂಚಾಯತ ಗೋಕಾಕ ಇವರು ಪ್ರತಿ ಗ್ರಾಮ ಪಂಚಾಯತಿಗೆ ಸ್ವಚ್ಛತಾ ದೂತರನ್ನು ನೇಮಿಸಿಕೊಂಡು ಸದರಿ ಸ್ವಚ್ಛತಾ ದೂತರಿಗೆ ಸಿ.ಎಲ್.ಟಿ.ಎಸ್. ತರಬೇತಿ ನೀಡಿರುತ್ತಾರೆ. ಉಲ್ಲೇಖ (3) ರಲ್ಲಿ ಗೋಕಾಕ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ 51 ಗ್ರಾಮ ಪಂಚಾಯತಿಗಳಲ್ಲಿ ಗುರುತಿಸಲ್ಪಟ್ಟ ಸ್ವಚ್ಛತಾ ದೂತರಿಗೆ ದಿನಾಂಕ:14-10-2013 ರಿಂದ 3 ತಿಂಗಳವರೆಗೆ ಪ್ರೇರಣಾ ಮೊತ್ತವಾಗಿ ಪ್ರತಿ ತಿಂಗಳಿಗೆ ರೂ.2000.00 (ಎರಡು ಸಾವಿರ ಮಾತ್ರ) ರಂತೆ ಒಟ್ಟು 87 ಸ್ವಚ್ಛತಾ ದೂತರಿಗೆ ರೂ.5.22 ಲಕ್ಷ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ. ಆದ್ದರಿಂದ ಗೋಕಾಕ ತಾಲ್ಲೂಕಿನಲ್ಲಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಗುರುತಿಸಲ್ಪಟ್ಟ ಸ್ವಚ್ಛತಾ ದೂರತಿಗೆ 3 ತಿಂಗಳವರೆಗೆ ಪ್ರೇರಣಾ ಮೊತ್ತವಾಗಿ ಪ್ರತಿ ತಿಂಗಳು ರೂ.2000.00 (ಎರಡು ಸಾವಿರ ಮಾತ್ರ) ರಂತೆ ಒಟ್ಟು 87 ಸ್ವಚ್ಛತಾ ದೂತರಿಗೆ ರೂ.5.22 ಲಕ್ಷ ಅನುದಾನವನ್ನು ಈ ಕೆಳಗಿನಂತೆ ಬಿಡುಗಡೆ ಮಾಡಿ ಆದೇಶಿಸಿದೆ.

## ಆದೇಶ

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಗೋಕಾಕ ತಾಲ್ಲೂಕಿನಲ್ಲಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಗುರುತಿಸಲ್ಪಟ್ಟ ಪ್ರತಿ ಸ್ವಚ್ಛತಾ ದೂತರಿಗೆ 3 ತಿಂಗಳವರೆಗೆ ಪ್ರೇರಣಾ ಮೊತ್ತವಾಗಿ ಪ್ರತಿ ತಿಂಗಳು ರೂ.2000.00 (ಎರಡು ಸಾವಿರ ಮಾತ್ರ) ರಂತೆ ಒಟ್ಟು 87 ಸ್ವಚ್ಛತಾ ದೂತರಿಗೆ ರೂ.5.22 ಲಕ್ಷ ಅನುದಾನವನ್ನು ಗೋಕಾಕ ತಾಲ್ಲೂಕ ಪಂಚಾಯತಿಯ ನೀರು ಮತ್ತು ನೈರ್ಮಲ್ಯ ಸಮೀತಿಗೆ ಬಿಡುಗಡೆ ಮಾಡಿ ಆದೇಶಿಸಿದೆ. ಪ್ರೇರಣಾ ಮೊತ್ತವನ್ನು ಸಿ.ಎಲ್.ಟಿ.ಎಸ್. ತರಬೇತಿ ಪಡೆದ ಸ್ವಚ್ಛತಾ ದೂತರಿಗೆ ಮಾತ್ರ ಸಂದಾಯ ಮಾಡತಕ್ಕದ್ದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರು ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಂತೆ ಅನುದಾನವನ್ನು ಸಂಬಂಧಿಸಿದ ತಾಲ್ಲೂಕ ಪಂಚಾಯತಿಯ ನೀರು ಮತ್ತು ನೈರ್ಮಲ್ಯ ಸಮೀತಿಗೆ ಬಿಡುಗಡೆ ಮಾಡಲು ಆದೇಶಿಸಿದೆ. ಸದರಿ ವೆಚ್ಚವನ್ನು ನಿರ್ಮಲ ಭಾರತ ಅಭಿಯಾನ ಯೋಜನೆಯ ಐ.ಇ.ಸಿ. ವೆಚ್ಚದಲ್ಲಿ ಭರಿಸತಕ್ಕದ್ದು.

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.

ಪ್ರತಿಯನ್ನು:ಆಯುಕ್ತರು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಮಿಷನ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, 2 ನೇ ಮಹಡಿ, ಕೆ.ಎಚ್.ಬಿ.ಕಟ್ಟಡ, ಕಾವೇರಿ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿಯನ್ನು:ಆಯುಕ್ತರು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಮಿಷನ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, 2 ನೇ ಮಹಡಿ, ಕೆ.ಎಚ್.ಬಿ.ಕಟ್ಟಡ, ಕಾವೇರಿ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

**<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.</u>**

1. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ, ಬೆಳಗಾವಿ.
2. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕ ಪಂಚಾಯತ ಗೋಕಾಕ.
3. ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ________________________ ತಾ|ಗೋಕಾಕ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.